
# ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳಲ್ಲಿ ನಾನು ಮೆಚ್ಚುವ ಅಂಶಗಳು

– ಕುಮಾರಿ ಹೇಮಾ. ಕೆ.

ಕಳೆದ ವರ್ಷ ಏರ್ಪಡಿಸಲಾಗಿದ್ದ 'ವಿವೇಕಪ್ರಭ' ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದ ಈ ಪ್ರಬಂಧವನ್ನು ಬರೆದಿರುವ ಕುಮಾರಿ ಹೇಮಾ. ಕೆ. ಬೆಂಗಳೂರಿನ ವಿ.ವಿ.ಪುರಂನಲ್ಲಿರುವ ವಾಸವಿ ವಿದ್ಯಾನಿಕೇತನ ಕಾಲೇಜಿನ ವಿದ್ಯಾರ್ಥಿನಿ.

**ಉತ್ತಿಷ್ಠತ. ಜಾಗ್ರತ, ಪ್ರಾಪ್ಯವರಾನ್ನಿಬೋಧತ**—ಏಳಿ, ಜಾಗೃತರಾಗಿ. ಗುರಿ ಸೇರುವವರೆಗೂ ನಿಲ್ಲಬೇಡಿ ಎಂಬ ಧೀರತೆಯ ದುಂದುಭಿಯನ್ನು ಮೊಳಗಿಸಿದ ಸ್ವಾಮಿ ವಿವೇಕಾನಂದರ ಪ್ರತಿಯೊಂದು ನುಡಿ, ನಡೆ ನಮ್ಮೆಲ್ಲರ ಬದುಕಿನಲ್ಲಿ ಬೆಳಕು ಹರಿಸುವಂಥದ್ದು. ಸ್ವಾಮೀಜಿಯವರ ಮಾತುಗಳು ನಿತ್ಯ ನೂತನ ಶಕ್ತಿ, ಅವರ ಜೀವನ ಅನಂತ ಸ್ಫೂರ್ತಿ. ಅವು ಹೇಡಿಯ ಹೃದಯದಲ್ಲಿ ಧೈರ್ಯದ ಜ್ವಾಲೆಯನ್ನು, ಬಲಹೀನನ ದೇಹದಲ್ಲಿ ಮಿಂಚಿನ ಸಂಚಾರವನ್ನು ಉಂಟುಮಾಡುತ್ತವೆ.




ಆಧ್ಯಾತ್ಮಿಕತೆಯಾಗಲೀ, ವಿಜ್ಞಾನ–ತಂತ್ರಜ್ಞಾನವೇ ಆಗಲಿ, ಭಾರತದ ಸ್ವತಂತ್ರತೆ, ಸ್ವಾಯತ್ತತೆಯಾಗಲಿ ಎಲ್ಲ ವಿಷಯಗಳಲ್ಲೂ ಸ್ವಾಮಿಜಿಯವರ ನಿಲುವು ಸ್ಫಟಿಕ ಶುದ್ಧ, ಹಿಮವತ್ಪರ್ವತದಂತೆ ಶ್ರೇಷ್ಠ ಮತ್ತು ಅಚಲ. ಸ್ವಾಮಿಜಿಯವರು ಅಂಧಕಾರದಲ್ಲಿ ತೊಳಲಾಡುತ್ತಿದ್ದ ಯುವಜನತೆಗೆ ಗುರಿಯನ್ನೂ, ಅದರೆಡೆಗೆ ನಡೆಯುವ ಮಾರ್ಗವನ್ನೂ ತೋರಿದರು.

ಸ್ವಾಮಿಜಿಯವರು ಭಾರತದ ಪ್ರತಿಯೊಬ್ಬ ಯುವಕನಲ್ಲೂ ಅಖಂಡ ಆತ್ಮಶ್ರದ್ಧೆಯನ್ನು ಮಾತ್ರ ನಿರೀಕ್ಷಿಸಿದರು. ಜಗತ್ತಿನಲ್ಲಿರುವ ಅತ್ಯಂತ ಕ್ರೂರ ಪಾಪವೆಂದರ ದುರ್ಬಲತೆಯೇ ಎಂದು ಸಾರಿದರು. ಮನುಷ್ಯ ತಾನು ದುರ್ಬಲನೆಂದು ನಂಬುತ್ತಾನೆ. ಅದಕ್ಕಾಗಿಯೇ ಮತ್ತಾವುದೋ ಅದೃಶ್ಯ ಶಕ್ತಿಯೊಂದರ ಮೊರೆ ಹೋಗುತ್ತಾನೆ. ಆದರೆ ಸ್ವಾಮಿಜಿಯವರಿಗೆ ಇಂತಹುದರಲ್ಲಿ ಕಿಂಚಿತ್ತೂ ನಂಬಿಕೆಯಿರಲಿಲ್ಲ. ಮನುಷ್ಯ ತನ್ನಲ್ಲಿ ತಾನು ನಂಬಿಕೆಯಿಡದಿದ್ದಲ್ಲಿ ಮುಕ್ಕೋಟಿ ದೇವತೆಗಳನ್ನು ನಂಬಿಯೂ ಪ್ರಯೋಜನವಿಲ್ಲ. ಮನುಷ್ಯ ಎಂದಿಗೂ ತನ್ನನ್ನು ಮತ್ತೊಬ್ಬನಿಗೆ ಎರಡನೆಯವನು ಎಂದು ತಿಳಿದುಕೊಳ್ಳುವುದು ಬೇಕಿಲ್ಲ. ಮನುಷ್ಯ ತನ್ನನ್ನು ಅತಿ ಚಿಕ್ಕವನು ಎಂದುಕೊಳ್ಳುವುದು ಹಿರಿಮೆ ಎಂದು ಜನ ಭಾವಿಸಿದರೆ, ಸ್ವಾಮಿಜಿ ಅದನ್ನು "ಮಾರುವೇಷದ ಅಹಂಕಾರ" ಎನ್ನುತ್ತಾರೆ. ಅವರೇ ಹೇಳುವಂತೆ, ತಾವು ಎಂದಿಗೂ ತಮ್ಮನ್ನು ಕೀಳಾಗಿ ಕಾಣುವುದಿಲ್ಲ. 'ಅಸಾಧ್ಯ' ಎಂಬ ಪದ ಅವರ ಬಾಯಿಂದ ಬರುವುದೇ ಇಲ್ಲ.

ಸ್ವಾಮಿಜಿಯವರು ತಮ್ಮ ಬಿ.ಎ. ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲು ಪ್ರಾರಂಭಿಸಿದ್ದು ಪರೀಕ್ಷೆಯ ಕೇವಲ ಒಂದು ತಿಂಗಳ ಹಿಂದೆಯಷ್ಟೇ. ಇಡೀ ವರ್ಷ ಅವರು ಸತ್ಯದ ಅನ್ವೇಷಣೆಯಲ್ಲಿ ತೊಡಗಿ, ಪ್ರಸಿದ್ಧ ವ್ಯಕ್ತಿಗಳ ವಿಚಾರಗಳನ್ನು ಓದುತ್ತಿದ್ದು ಇದರ ಕಡೆಗೆ ಗಮನ ಹರಿಸಿರಲಿಲ್ಲ. ಆದರೆ ಈ ಪರೀಕ್ಷೆ ಅವರನ್ನು ಭಯಗೊಳಿಸಲಿಲ್ಲ. ತಮ್ಮ 'ಆತ್ಮಶ್ರದ್ಧೆ' ಎಂಬ ಒಂದೇ ಶಕ್ತಿಯಿಂದ ಅವರು ಎಲ್ಲವನ್ನೂ ಜಯಿಸಬಹುದಿತ್ತು. ಗ್ರಂಥಾಲಯದಿಂದ ಅವರು ಪುಸ್ತಕಗಳನ್ನು ತರಿಸಿಕೊಂಡಾಗ, ಮಾರನೆಯ ದಿನವೇ ಅದನ್ನು ಮರಳಿ ಕಳುಹಿಸುತ್ತಿದ್ದರು. ಒಂದು ದಿನದಲ್ಲಿ ಅವರು ಏನು ಓದಿಯಾರು, ಎಂದು ಗ್ರಂಥಾಲಯದವರು ಹುಬ್ಬೇರಿಸಿದಾಗ ಪುಟಗಳ ಸಂಖ್ಯೆಯೊಂದಿಗೆ ಇಡೀ ಪುಸ್ತಕವನ್ನೇ ಒಪ್ಪಿಸಿದರು. ಬ್ರಿಟಿಷ್ ವಿಶ್ವಕೋಶದ ಹತ್ತು ಸಂಪುಟಗಳು ಅವರಿಗೆ ಕರತಲಾಮಲಕವಾಗಿತ್ತು!

ಭಾರತದಂತಹ ಅಖಂಡ ರಾಷ್ಟ್ರವನ್ನು ಪರದೇಶಿಯರು ಅಷ್ಟು ವರ್ಷಗಳ ಕಾಲ ತುಳಿಯುವುದಕ್ಕೆ ಸಾಧ್ಯವಾದದ್ದು ಕೇವಲ 'ಆತ್ಮಶ್ರದ್ಧೆ' ಅವರಲ್ಲಿ ಹೆಚ್ಚಾಗಿದ್ದುದರಿಂದ ಹಾಗೂ ಭಾರತೀಯರಲ್ಲಿ ಅದರ ಕೊರತೆಯಿದ್ದುದರಿಂದ ಎನ್ನುತ್ತಾರೆ ಸ್ವಾಮಿಜಿ.

ಸ್ವಾಮಿಜಿಯವರ ಸಂದೇಶಗಳನ್ನು ಕೇವಲ ಮೆಚ್ಚಿಕೊಂಡರೆ ಸಾಲದು, ಇಂದಿನ ಯುವಜನತೆ ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರ ಕನಸು ನನಸಾಗುತ್ತದೆ. ಸ್ವಾಮಿಜಿಯವರ ಯಾವ ಬೋಧನೆಯೂ, ಯಾರಿಗೂ ಕಬ್ಬಿಣದ ಕಡಲೆಯಾಗಲು ಸಾಧ್ಯವಿಲ್ಲ. ಅವರ

ವಿಚಾರಗಳಲ್ಲಿ ಹಾಗೂ ವಸ್ತುಸ್ಥಿತಿಯನ್ನು ಅರ್ಥೈಸುವ ದೃಷ್ಟಿಕೋನದಲ್ಲಿ ಹೊಸತನವನ್ನು ಕಾಣಬಹುದು. ಇಂಥದ್ದೇ ಹೊಸತನವನ್ನು ಅವರ ಧರ್ಮದ ವಿವರಣೆಯಲ್ಲೂ ಕಾಣಬಹುದಾಗಿದೆ.

ಆಧ್ಯಾತ್ಮಿಕತೆಯ ಸೋಗಿನಲ್ಲಿ ಅನೇಕ ಮೌಢ್ಯಾಚರಣೆಗಳ ಕೂಪದಲ್ಲಿ ಮುಳುಗಿತ್ತು ಭಾರತ. ಅಷ್ಟಲ್ಲದೆ ಪ್ರಪಂಚದಲ್ಲಿಯೇ ಧರ್ಮದ ಬಗೆಗೆ ಗೊಂದಲ ಉಂಟಾಗಿತ್ತು. ಯಾವ ಧರ್ಮ ಹೆಚ್ಚು, ಯಾವ ಧರ್ಮ ಕಡಿಮೆ, ಎಂಬುದೇ ಒಂದು ದೊಡ್ಡ ಚರ್ಚಾ ವಿಷಯವಾಗಿತ್ತು. ಅನೇಕ ಧರ್ಮಗಳ ಪ್ರಭಾವಕ್ಕೆ ಸಿಕ್ಕ ಹಿಂದೂ ಧರ್ಮವೂ ಸುಳಿಗೆ ಸಿಕ್ಕಿ ಒದ್ದಾಡುವಂತಾಗಿತ್ತು.

ಇಂತಹ ಸಂದರ್ಭದಲ್ಲಿ ಧರ್ಮಕ್ಕೆ ಹೊಸ ಅರ್ಥ ಕೊಟ್ಟವರು ಸ್ವಾಮಿಜಿ. ವಿವಿಧ ಧರ್ಮಗಳು ದೇವರನ್ನು ಸೇರಲು ಇರುವ ಅನೇಕ ಮಾರ್ಗಗಳು, ಎಂದರು. "ವಿಶ್ವಧರ್ಮ ಎಂಬುದು ಭೂಮಿಯ ಮೇಲಿರುವ ಎಲ್ಲಾ ಧರ್ಮಗಳು ಒಟ್ಟುಗೂಡಿ ಆಗಬೇಕು. ನಿಜವಾದ ಧರ್ಮ ಎಂಬುದು ಕೃಷ್ಣ ಮತ್ತು ಕ್ರಿಸ್ತರ ಅನುಯಾಯಿಗಳ ಮೇಲೆಯೂ, ತಪಸ್ವಿ ಹಾಗೂ ತಪ್ಪು ಮಾಡಿದವರ ಮೇಲೆಯೂ, ಸೂರ್ಯನಂತೆ ಸಮನಾಗಿ ಪ್ರಕಾಶ ಬೀರಬೇಕು. ಕಾಲದೇಶಗಳ ಮಿತಿಯಿಲ್ಲದೆ ದೇವರಂತೆ ಅನಂತವಾಗಿದ್ದು, ನಿರಂತರವಾಗಿ ಅಭಿವೃದ್ಧಿ ಹೊಂದುತ್ತಿರಬೇಕು." ಇದು ವಿವೇಕಾನಂದರ ಧರ್ಮದ ವಿವರಣೆ. ಅವರೇ ಹೇಳುವಂತೆ ಜನರು ದೇವರನ್ನು ತಲುಪಲು ಪ್ರಪಂಚವನ್ನು ಮಾರ್ಗವಾಗಿ ಮಾಡಿಕೊಳ್ಳುವ ಬದಲು, ಪ್ರಪಂಚವನ್ನೇ ಗುರಿಯಾಗಿ ಮಾಡಿಕೊಂಡು ದೇವರನ್ನು ಮಾರ್ಗವನ್ನಾಗಿ ಮಾಡಿಕೊಳ್ಳುತ್ತಾರೆ. ಇಂತಹದೊಂದು ಘೋರ ಪಾಪ, ಅಜ್ಞಾನದಿಂದಲೂ, ಅತಿಯಾಸೆಯಿಂದಲೂ ಆಗಬಹುದು. ಆದರೆ, ಇದನ್ನು ಸರಿಪಡಿಸಲು ಸಾಧ್ಯವಾದದ್ದು ಕೇವಲ ಸ್ವಾಮಿಜಿಯವರ ಹೊಸ ದೃಷ್ಟಿಕೋನದಿಂದ.

ಧರ್ಮದ ಬಗೆಗೆ ಸ್ವಾಮಿಜಿಯವರ ನಿಲುವನ್ನು ವಿಶ್ಲೇಷಿಸುವಾಗ ಮರೆಯಲು ಆಗದಂತಹ ಮತ್ತೊಂದು ವಿಷಯವಿದೆ—ವೈಚಾರಿಕತೆ. 'ಹಸಿದವನಿಗೆ ಧರ್ಮವನ್ನು ಬೋಧಿಸಬೇಡಿ, ಅವನಿಗೆ ಮೊದಲು ತಿನ್ನಲು ಅನ್ನ ಕೊಡಿ" ಎನ್ನುತ್ತಾರೆ ಸ್ವಾಮಿಜಿ. ಅವರು ಮಾನವೀಯತೆಗೆ ಕೊಟ್ಟ ಪ್ರಾಶಸ್ತ್ಯ ಇಲ್ಲಿ ಸ್ಪಷ್ಟ ವಿಜ್ಞಾನ-ತಂತ್ರಜ್ಞಾನದ ಪರಿಚಯವಾದಾಗಿನಿಂದ ಹಳತು-ಹೊಸತುಗಳ ತೂಗುಯ್ಯಾಲೆಯಲ್ಲಿ ಇಂದಿಗೂ ಭಾರತ ಕುಳಿತಿದೆ. ಭಾರತ ಇನ್ನೂ ಜೀವಂತವಾಗಿದ್ದರೆ ಅದು ಕೇವಲ ತನ್ನ ಧರ್ಮದ ಬಲದಿಂದ ಎನ್ನುತ್ತಾರೆ ಸ್ವಾಮಿಜಿ. ಅವರ ಪ್ರಕಾರ ಇಂದು ಭಾರತಕ್ಕೆ ಬೇಕಾಗಿರುವುದು ಧರ್ಮದ ಜೊತೆಗೂಡಿದ ವಿಜ್ಞಾನ ಹಾಗೂ ಪಾಶ್ಚಾತ್ಯಕ್ಕೆ ಬೇಕಾಗಿರುವುದು ವಿಜ್ಞಾನದ ಜೊತೆಗೂಡಿದ ಧರ್ಮ. ಹೀಗೆ ಇವೆರಡರ ನಡುವೆ ಸಮತೋಲನವನ್ನು ಕಾಪಾಡಿದಾಗಲೇ ಮಾನವನ ಪೂರ್ಣ ಅಭಿವೃದ್ಧಿ ಸಾಧ್ಯ ಎನ್ನುತ್ತಾರೆ. ಮಾನವ "ಪ್ರಕೃತಿಯ ನಾಯಕ" ನಾಗಬೇಕು ಎನ್ನುತ್ತಾರೆ. ಇಲ್ಲಿ ಮತ್ತೊಮ್ಮೆ ಅವರ ವೈಚಾರಿಕತೆ ಗಮನ ಸೆಳೆಯುತ್ತದೆ. ಅವರು ಎಂದಿಗೂ ಮನುಷ್ಯನನ್ನು ತಪಸ್ವಿಯಾಗಲು ಹೇಳಲಿಲ್ಲ. ಬದಲಾಗಿ ಇರುವವರೆಗೂ ಕ್ರಿಯಾಶೀಲರಾಗಲು ಹೇಳಿದರು.

ಇವಿಷ್ಟೇ ಅಲ್ಲದೆ ಸ್ವಾಮಿಜಿಯವರ ಸಂದೇಶಗಳಲ್ಲಿ ಇಂದಿನ ಯುವಜನತೆ ಪಾಲಿಸಬೇಕಾದ ಅಂಶಗಳು ಬಹಳಷ್ಟಿವೆ. ಅವರು ಬೋಧಿಸಿದ ನಿಃಸ್ವಾರ್ಥ ಸೇವೆ, ಆತ್ಮಗೌರವ, ರಾಷ್ಟ್ರಪ್ರೇಮ, ಪ್ರತಿಯೊಬ್ಬರಲ್ಲೂ ದೇವರನ್ನು ಕಾಣುವ ರೀತಿ—ಯಾವುದೇ ಆಗಿರಬಹುದು. ಪಾಶ್ಚಾತ್ಯ ವ್ಯಕ್ತಿಯೊಬ್ಬರು ತಾವು ಹೇಗೆ ಸೇವೆ ಸಲ್ಲಿಸಬಹುದು ಎಂದು ಕೇಳಿದಾಗ ಅವರು "ನನ್ನ ದೇಶವನ್ನು ಪ್ರೀತಿಸು" ಎಂದು ಹೇಳಿದರು. ಹಾಗೆಯೇ ವಿದೇಶದಿಂದ ಶಿಷ್ಯರಾಗಿ ಇಲ್ಲಿಗೆ ಬಂದವರೆಲ್ಲರಿಗೂ "ಸೇವಾಮನೋಭಾವವನ್ನು" ವಿವರಿಸಿ, ಎಂದಿಗೂ ಯಾರಿಗೂ ಸಹಾಯ ಮಾಡುತ್ತಿರುವೆನೆಂದು ಹೆಮ್ಮೆ ಪಡಬಾರದೆಂದು ತಿಳಿಸಿದರು.

ಕಡಲಿನ ನೀರನ್ನು ಹಿಡಿಯಲ್ಲಿ ಹಿಡಿಯುವುದು ಸಾಧ್ಯವಿಲ್ಲ. ಇದು ಸಹ ಬಹುಶಃ ಅಂತಹದೊಂದು ಪ್ರಯತ್ನ. ಆದರೂ ಸಹ, ಸ್ವಾಮಿಜಿಯವರ ಜೀವನ ಮತ್ತು ಸಂದೇಶಗಳಲ್ಲಿನ ಕೆಲವು ಅಂಶಗಳನ್ನಾದರೂ ನಾವು ಅಳವಡಿಸಿಕೊಳ್ಳುವುದು ಸಾಧ್ಯವಾದರೆ ನಮ್ಮ ಜೀವನ ಸಾರ್ಥಕವಾಗುತ್ತದೆ.

**ನಿಮ್ಮ ವ್ಯಕ್ತಿತ್ವವನ್ನು ಉತ್ತಮಗೊಳಿಸಿಕೊಳ್ಳಲು....**

- ನಿರ್ದಿಷ್ಟವಾದ ಒಂದೇ ಒಂದು ಗುರಿ ಇರಲಿ. ಆಯಾ ಸಮಯದಲ್ಲಿ ಆಯಾ ಕೆಲಸವನ್ನೇ ಮಾಡಲು ಪ್ರಯತ್ನಿಸಿ.
- ವರ್ತಮಾನದಲ್ಲಿ ಬದುಕಿ.
- ನಿನ್ನೆಯ ತಪ್ಪುಗಳಿಂದ ಅಮೂಲ್ಯವಾದ ಪಾಠಗಳನ್ನು ಕಲಿಯಲು ಮರೆಯದಿರಿ.
- ನಿಮ್ಮನ್ನೇ ಆಗಲಿ ಇತರರನ್ನೇ ಆಗಲಿ ದೂಷಿಸಬೇಡಿ.
- ಆತ್ಮೋದ್ಧಾರದ ಬಗ್ಗೆ ಕಾಳಜಿ ಇರಲಿ.
- ನಿಮ್ಮನ್ನೇ ನೀವು ಪ್ರಾಮಾಣಿಕವಾಗಿ ಪರಿಶೀಲಿಸಿಕೊಳ್ಳಿ.
- ಇತರರ ಬಗ್ಗೆ ಪೂರ್ವಗ್ರಹಗಳಿಲ್ಲದಿರಲಿ. ಇತರರು ಹೇಳಿದ್ದನ್ನು ಕೇಳುವುದು ಹಾಗೂ ಹಾಗೆ ಕೇಳಿಸಿಕೊಂಡದ್ದರಿಂದ ಕಲಿಯುವುದನ್ನು ಅಭ್ಯಾಸ ಮಾಡಿ.
- ಹಿಡಿದ ಕೆಲಸವನ್ನು ಮುಗಿಯುವ ತನಕ ಬಿಡಬೇಡಿ. ತಪ್ಪು ಮಾಡಿದರೆ, ಭಯಪಡದೆ ಮತ್ತೊಮ್ಮೆ ಪ್ರಯತ್ನಿಸಿ.
- ನಿಮ್ಮ ಭಾವನೆ, ಊಹೆಗಳಿಗೆ ಆಸ್ಪದವಿರಲಿ. ಅವುಗಳನ್ನು ಕ್ರಿಯಾತ್ಮಕವಾಗಿ ಬಳಸಿಕೊಂಡು ಯಶಸ್ಸನ್ನು ಗಳಿಸಿ.
- ಈ ವಾಕ್ಯವನ್ನೆಂದೂ ಮರೆಯಬೇಡಿ: "ಮನುಷ್ಯನ ವ್ಯಕ್ತಿತ್ವವೆಂದರೆ ಹೂವಿಗೆ ಇರುವ ಅದರ ಪರಿಮಳದಂತೆ."